## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 930 |
| ಸದಸ್ಯರ ಹೆಸರು | : | ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18.12.2018 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದ ಹಲವು ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ರಸ್ತೆ, ಬೀದಿ ದೀಪ, ಕುಡಿಯುವ ನೀರು ಮುಂತಾದ ಸೌಲಭ್ಯ ಪಡೆಯುತ್ತಿದ್ದರೂ ಸಹ ಹಲವು ಕಂದಾಯ ಭೂಮಿಯಲ್ಲಿ ನಿರ್ಮಾಣವಾದ ಕಟ್ಟಡಗಳೂ ತೆರಿಗೆ ವ್ಯಾಪ್ತಿಗೆ ಒಳಪಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಗ್ರಾಮ ಪಂಚಾಯಿತಿಯನ್ನು ಆರ್ಥಿಕವಾಗಿ ಸದೃಢಗೊಳಿಸಲು ಸಲುವಾಗಿ ಇವುಗಳನ್ನು ಕಡ್ಡಾಯವಾಗಿ ತೆರಿಗೆ ವ್ಯಾಪ್ತಿಗೆ ತರಲು ಸರ್ಕಾರ ನಿರ್ಧರಿಸಿದೆಯೇ; | ಕೃಷಿಯೇತರ ಜಮೀನೆಂದು ಘೋಷಿತವಾಗಿಲ್ಲದ ಪ್ರದೇಶಗಳಲ್ಲಿ ಈಗಾಗಲೇ ಕಟ್ಟಡ ನಿರ್ಮಿಸಿದ್ದಲ್ಲಿ, ಅಂತಹ ಕಟ್ಟಡಗಳ ಮೇಲೆ ತೆರಿಗೆಯನ್ನು ಗ್ರಾಮ ಪಂಚಾಯತಿಗಳು ವಿಧಿಸಿ ವಸೂಲಿ ಮಾಡಲು ಅವಕಾಶ ಕಲ್ಪಿಸಿದೆ. |
| ಇ | ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಇವುಗಳನ್ನು, ತೆರಿಗೆ ವ್ಯಾಪ್ತಿಗೆ ಒಳಪಡಿಸಲಾಗುವುದು; | ಅನ್ವಯಿಸುವುದಿಲ್ಲ. |
| ಈ | ನಿರ್ಧಿಷ್ಟ ಕಾಲಮಿತಿಗಿಂತ ಹಿಂದೆ ನಿರ್ಮಾಣವಾದ ಕಟ್ಟಡಗಳ ಅಗತ್ಯ ದಾಖಲೆ ಪಡೆದು ನಮೂನೆ 9 ವಿತರಿಸುವಂತೆ ಆದೇಶ ಮಾಡಿದ್ದರೂ ಸಹ ಕಂದಾಯ ಭೂಮಿಯಲ್ಲಿ ಕಟ್ಟಡ ನಿರ್ಮಾಣ ಮಾಡಲು ಯಾವುದೇ ಗ್ರಾಮ ಪಂಚಾಯಿತಿಯವರೂ ಸಹ ಪೂರ್ವಾನುಮತಿ ನೀಡದೇ ಇರುವುದರಿಂದ ನಮೂನೆ 9ನ್ನು ಪಡೆಯಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ದಿನಾಂಕ 14.06.2013ರ ಪೂರ್ವದಲ್ಲಿ ಸೃಜನೆಯಾಗಿರುವ ಮತ್ತು ಗ್ರಾಮ ಪಂಚಾಯತಿಗಳು ನೀಡಿರುವ ಲೈಸೆನ್ಸ್ ಪಡೆದು ಖಾಯಂ ಆಗಿ ಈಗಾಗಲೇ ಮನೆ ನಿರ್ಮಾಣ ಮಾಡಿಕೊಂಡಿರುವ ಆಸ್ತಿಗಳಿಗೆ ಮಾತ್ರ ಒಂದು ಬಾರಿಗೆ ಏಕ ನಿವೇಶನ ನಕ್ಷೆ ಅನುಮೋದನೆಯಿಂದ ವಿನಾಯತಿ ನೀಡಿ ನಮೂನೆ 9 ಮತ್ತು 11ಎ ವಿತರಿಸಲು ಆದೇಶಿಸಿದೆ. |
| ಉ | ಬಂದಿದ್ದರೆ, ಪೂರ್ವಾನುಮತಿಯ ಬದಲು ನಿರ್ದಿಷ್ಟ ಅವಧಿಗಿಂತ ಮೊದಲು ನಿರ್ಮಾಣವಾದ ಬಗ್ಗೆ ಸೂಕ್ತ ದಾಖಲೆ ಪಡೆದು ನಮೂನೆ 9ನ್ನು ವಿತರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? | ದಿನಾಂಕ 14.06.2013ರ ಪೂರ್ವದಲ್ಲಿ ಸೃಜನೆಯಾಗಿರುವ ಮತ್ತು ಗ್ರಾಮ ಪಂಚಾಯತಿಗಳು ನೀಡಿರುವ ಲೈಸೆನ್ಸ್ ಪಡೆಯದೆ ಖಾಯಂ ಆಗಿ ಈಗಾಗಲೇ ಮನೆ ನಿರ್ಮಾಣ ಮಾಡಿಕೊಂಡಿರುವ ಆಸ್ತಿಗಳಿಗೆ ನಮೂನೆ 9 ಮತ್ತು 11ಎ ವಿತರಿಸಲು ಗ್ರಾಮ ಪಂಚಾಯತಿಗಳಿಗೆ ಅವಕಾಶವಿರುವುದಿಲ್ಲ. |

ಸಂಖ್ಯೆ. ಗ್ರಾಅಪ 1244 ಗ್ರಾಪಂಅ 2018

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು
ಹಾಗೂ ಸಂಸದೀಯ ವ್ಯವಹಾರಗಳ ಸಚಿವರು.